ಅಸಲು ದಾವಾ ನಂಃ 223/2020

ಡಿ ಡಬ್ಲ್ಯೂಃ 1

ದಿನಾಂಕಃ 29.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಐ ವಿ ಎಂ ರವರಿಂದಃ

8) ಶ್ರೀ ಆರ್ ಎಸ್ ಹೆಗಡೆ ವಕೀಲರು ದಿನಾಂಕಃ 30.05.1998 ರಂದು ಸುಶಿಲಾಬಾಯಿ ಪರವಾಗಿ ನನಗೆ ನೋಟೀಸು ಕೊಟ್ಟಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಮತ್ತೆ ಬಂದು ಭೇಟಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ನೋಟೀಸಗೆ ಉತ್ತರ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ನೋಟೀಸಗೆ ಉತ್ತರವನ್ನು ಅಂಚೆ ಮೂಲಕವೇ ಕಳಿಸಿರುತ್ತೇನೆ. ಅಂಚೆ ಮೂಲಕ ನೋಟೀಸ ಕಳಿಸಿದ್ದರೆ ಅಂಚೆ ರಶೀದಿ ಮತ್ತು ಸ್ವಿಕೃತ ಪತ್ರ ಕೊಡುತ್ತಾರೆ ಎಂದರೆ ಸಾಕ್ಷಿಯು ನೋಟೀಸು ಮುಟ್ಟದೇ ವಾಪಸ್ಸು ಬಂದಿರುತ್ತದೆ ಎಂದು ನುಡಿಯುತ್ತಾರೆ. ರಶೀದಿಯನ್ನು ಹಾಜರು ಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಅದನ್ನು ಕೊಟ್ಟಿರುತ್ತಾರೋ ಇಲ್ಲವೋ ತನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಜಾರಿಯಾಗದೇ ವಾಪಸ್ಸು ಬಂದಿರುವ ನೋಟೀಸನ್ನು ಮಾನ್ಯ ನ್ಯಾಯಾಲಯದಲ್ಲಿ ಹಾಜರು ಪಡಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಶ್ರೀ ಆರ್ ಎಸ್ ಹೆಗಡೆ ವಕೀಲರು ಕೊಟ್ಟಿರುವ ನೋಟೀಸಗೆ ನಾನು ಯಾವುದೇ ಉತ್ತರವನ್ನು ಕೊಟ್ಟಿರುವುದಿಲ್ಲ ಮತ್ತು ಅದು ಜಾರಿಯಾಗದೇ ವಾಪಸ್ಸು ಬಂದಿರುವುದಿಲ್ಲ ಎಂದರೆ ಸರಿಯಲ್ಲ.

9) ನಿಡಿ-30 ರ ದಾಖಲೆಯಲ್ಲಿ ಸಿಕ್ಕಾ ಶೀಲು ಹಾಗೂ ಸಹಿ ಇರುವುದಿಲ್ಲ ಎಂದರೆ ಸಾಕ್ಷಿಯು ಮತ್ತೆ ಬಂದು ತೊಂದರೆ ಕೊಟ್ಟರೆ ಹೇಳಿ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿ ನನಗೆ ಒಂದು ರಶೀದಿಯನ್ನು ಕೊಟ್ಟಿದ್ದು ಅದು ಎಲ್ಲಿ ಇರುತ್ತದೆ ಎಂದು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ನಿಡಿ-30 ರಂತೆ ಯಾವುದೇ ಫಿರ್ಯಾದಿಯನ್ನು ಕೊಟ್ಟಿರುವುದಿಲ್ಲ ಆದರೂ ಕೂಡ ಕೊಟ್ಟಿರುತ್ತೇನೆ ಎಂದು ಸುಳ್ಳು ದಾಖಲೆಯನ್ನು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸು ಪುನಃ ತೊಂದರೆ ಕೊಟ್ಟರೆ ಬಂದು ದೂರು ಕೊಡುವಂತೆ ತಿಳಿಸಿದ್ದರು, ಒಂದು ರಶೀದಿಯನ್ನು ಕೂಡ ಕೊಟ್ಟಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನೋಟೀಸನ್ನು ಮಾಹಜಾನಗರ ಪಾಲಿಕೆಯಿಂದ 1 ನೇ ವಾದಿ ಹೆಸರಿಗೆ ಕೊಟ್ಟಿದ್ದು ನಿಮ ಹೆಸರಿಗೆ ಕೊಟ್ಟಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಮನೆಯಲ್ಲಿ ಇರುವದರಿಂದ ನೀವು ತುಂಬಬೇಕು ಎಂದು ಹೇಳಿ ಕಟ್ಟದಿದ್ದರೆ ಜಪ್ತ ಮಾಡುತ್ತೇವೆ ಎಂದು ಹೇಳಿ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಮಹಾನಗರ ಪಾಲಿಕೆಯವರ ಆರೀತಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

10) ಕೆ ಎಚ್ ಬಿ ರವರು ವಾದಿ ಹೆಸರಿಗೆ ದಿನಾಂಕಃ 06.02.2018 ರ ನಿಪಿ-1 ರಂತೆ ನೋಂದಾಯಿತ ಕ್ರಯ ಪತ್ರದಂತೆ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಮೋಸದಿಂದ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-1 ನ್ನು ಮೋಸದಿಂದ ಮಾಡಿಕೊಂಡಿರುತ್ತಾರೆ ಎಂದು ಯಾವುದಾದರೂ ಕ್ರಮ ತೆಗೆದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಇವತ್ತಿನವರೆಗೂ ಅವರು ಸಿಕ್ಕಿರುವುದಿಲ್ಲ ಎಂದು ನುಡಿಯುತ್ತಾರೆ. ಮಹಾನಗರ ಪಾಲಿಕೆಗೆ ತೆರಿಗೆ ಕಟ್ಟುವದು ನಿಮ್ಮ ಜವಾಬ್ದಾರಿಯಾಗಿರಲಿಲ್ಲ ಎಂದರೆ ಸಾಕ್ಷಿಯು ಅವರು ನನ್ನನ್ನು ಖಾಲಿ ಮಾಡಿಸುತ್ತೇನೆ ಮತ್ತು ಜಪ್ತು ಮಾಡಿಸುತ್ತೇನೆ ಎಂದು ಹೇಳಿದ್ದರಿಂದ ಕಟ್ಟಿರುತ್ತೇನೆ ಎಂದು ನುಡಿಯುತ್ತಾರೆ. 13000/- ಹಣವನ್ನು ಪಡೆದುಕೊಂಡು ಮನೆಯನ್ನು ಖಾಲಿ ಮಾಡಿಕೊಡಲು ನಾನು ಭಾಧ್ಯಸ್ಥಳು ಎಂದರೆ ಸಾಕ್ಷಿಯು ನಾನೇ ಮಾಲೀಕಳು ಇರುತ್ತೇನೆ ಎಂದು ನುಡಿಯುತ್ತಾರೆ. ನಾನು ಮಾಲೀಕಳು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಅವರು ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿಗೆ ನಾನು ಕಬ್ಜಾದಾರಳು ಮಾತ್ರ ಆಗಿದ್ದು ವಾದಿಯರೇ ಮಾಲೀಕರು ಇರುತ್ತಾರೆ ಎಂದರೆ ಸಾಕ್ಷಿಯು 3 ವರ್ಷ ಮಾತ್ರ ನಾನು ಕಬ್ಜಾದಾರಳಾಗಿದ್ದು ನಂತರ 40 ವರ್ಷದಿಂದ ಮಾಲೀಕಳಾಗಿರುತ್ತೇನೆ ಎಂದು ನುಡಿಯುತ್ತಾರೆ. ವಾದಿಯರ ದಾವೆ ಕ್ಲಿಷ್ಟಕರ ವಾಗಬೇಕೆಂದು ಎದುರು ಹಕ್ಕನ್ನು ಕೇಳಿರುತ್ತೇನೆ ಎಂದರೆ ಸರಿಯಲ್ಲ. ಕಬ್ಜಾವತ್ತಿ ಪತ್ರದ ಮೂಲಕ ಆಸ್ತಿ ಮಾಲೀಕತ್ವ ಬರುವುದಿಲ್ಲ ಎಂದರೆ ಸಾಕ್ಷಿಯು ಅವರು ಕಟ್ಟಿಕೊಳ್ಳಬೇಕಾಗಿತ್ತು ಎಂದು ನುಡಿಯುತ್ತಾರೆ.

11) ವಾದಿಯರು ಈ ದಾವೆಯನ್ನು ಹೂಡುವವರೆಗೂ ತಾನು ಮಾಲೀಕಳು ಎಂದು ಕೋರಿ ನಾನು ಯಾವುದೇ ದಾವೆಯನ್ನು ಹೂಡಿರುವುದಿಲ್ಲ ಎಂದರೆ ಸರಿ. ವಾದಿಯರಿಗೆ ಕಬ್ಜಾವನ್ನು ಕೊಡಬಾರದು ಎಂದು ಸುಳ್ಳು ಎದುರು ಹಕ್ಕನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಬ್ಜಾವತ್ತಿ ಪತ್ರ, ಮತ್ತು ಖರೀದಿ ಪತ್ರ ಹೊರತು ಪಡಿಸಿ ಬೇರೆ ಯಾವುದೇ ದಾಖಲೆಗಳು ಈ ದಾವಾ ಸ್ವತ್ತಿಗೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ. ಇದೆ

Sd/-

2 ನೇ ಹೆ. ದಿ. ನ್ಯಾಯಧೀಶರು
ಮತ್ತು ಜೆ.ಎಂ.ಎಫ್.ಸಿ-3, ಹುಬ್ಬಳ್ಳಿ